ಭಾಷಣವೂ ಇಲ್ಲ. ಅದಕ್ಕಿಂತ ಇಷ್ಟವಾದ ಸಂಗತಿಯನ್ನು ನಿಮಗೆ ಹೇಳಲಿಕ್ಕುಂಟು, ನೀವು ನೋಡಲಿಕ್ಕುಂಟು. ಸುಮ್ನೇ ಬನ್ನಿ. ನಾ ನಿಮ್ಮನ್ನೇನು ಕಿಡ್‌ನ್ಯಾಪ್ ಮಾಡುವವನಲ್ಲ, ತಿಳೀತಾ?' ಅಂತ ತಣ್ಣಗೆ ಹೇಳಿದಾಗ ನನಗೆ ಅಚ್ಚರಿ, ಕುತೂಹಲ. ಕಾರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ವೃತ್ತದಲ್ಲಿ ಬಲಗಡೆಗೆ ತಿರುಗಿ ದೊಡ್ಡಬಳ್ಳಾಪುರದ ರಸ್ತೆಯಲ್ಲಿ ಓಡುತ್ತಿತ್ತು. 'ಎಲ್ಲಿಗೆ ಹೋಗುವುದು ಅಂತಾದ್ರೂ ಹೇಳಿ ಮಾರಾಯ್ರೆ' ಅಂದೆ. 'ಅದು ಸಸ್ಪೆನ್ಸ್, ಆಯ್ತಾ?' ಅಂತ ನಕ್ಕು ಮತ್ತೆ ನನ್ನನ್ನು ಮಂಗ ಮಾಡಿದರು. ನಾನು ಸುಮ್ಮನಾದೆ. ಡಿ–ಮೊನೋಟೈಸೇಶನ್, ಜಿಎಸ್‌ಟಿ, ದೇಶದ ಆರ್ಥಿಕ ಪರಿಸ್ಥಿತಿ, ಕೋಮು–ಕಾವಿ ದಾಂಧಲೆ, ಅತ್ಯಾಚಾರ ಮೊದಲಾದ ಪ್ರಚಲಿತ ವಿದ್ಯಮಾನಗಳನ್ನು ಮಾತನಾಡುತ್ತಿದ್ದಾಗಲೇ ಕಾರು ಗಕ್ಕನೇ ನಿಂತಿತು. ಹೊರಗಡೆ ತಲೆ ಇಣುಕಿ ನೋಡಿದೆ. 'ಪ್ರಶಾಂತಿ ಧಾಮ ಎಸ್ಟೇಟ್, ಎಡಚನಹಳ್ಳಿ' ಎನ್ನುವ ಫಲಕವೊಂದು ಕಣ್ಣಿಗೆ ಬಿತ್ತು. ಸೀತಣ್ಣ ಹಾರ್ನ್ ಮಾಡಿದ ಕೂಡಲೇ ಕಸಬರಿಗೆ ಮೀಸೆಯ ದಡೂತಿಯೊಬ್ಬ ಓಡಿ ಬಂದು ಗೇಟು ತೆಗೆದು 'ಸಲಾಂ ಸಾಬ್' ಅಂದ. ಎಸ್ಟೇಟಿನ ಒಳಗೆ ಸುಮಾರು ಎರಡು ಫರ್ಲಾಂಗ್ ರಸ್ತೆಯಲ್ಲಿ ಕಾರು ಓಡಿ ಒಂದು ಫಾರ್ಮ್ ಹೌಸ್ ಬಳಿ ನಿಂತಿತು. ಕೆಳಗಿಳಿದು ಬಲಕ್ಕೆ ತಿರುಗಿದೆ. ಅಲ್ಲಿ ಬಿ.ಎಂ.ಡಬ್ಲ್ಯೂ ಕಾರ್ . ಇದನ್ನೆಲ್ಲೋ ನೋಡಿದ ಹಾಗಿದೆಯಲ್ಲ ಅಂದು ಕೊಳ್ಳುತ್ತಿರುವಂತೆಯೇ 'ವೆಲ್‌ಕಮ್ ಸಾರ್, ವೆಲ್‌ಕಮ್' ಚಿರಪರಿಚಿತ ದನಿಯೊಂದು ತೂರಿ ಬಂದಾಗ ತಿರುಗಿ ನೋಡಿದೆ. ಇಂದ್ರಕುಮಾರ್ ಕೈ ಜೋಡಿಸಿ ನಗುತ್ತ ನಿಂತಿದ್ದರು. ಅದೇ ದಿರಸು– ಬರ್ಮುಡಾ, ಟೀಶರ್ಟ್, ಕನ್ನಡಕ!

ಹಾಗೇ ನಾನು ಕ್ಷಣಕಾಲ ನಿಂತು ಸುತ್ತಲೂ ಕಣ್ಣಾಡಿಸಿದೆ. ಎಲ್ಲೆಲ್ಲೂ ನಳನಳಿಸುವ ಹಸಿರೇ ಹಸಿರು. ತೆಂಗು, ಬಾಳೆ, ದೇವಹಲಸು, ಮಾವು, ಚಿಕ್ಕು ಮರಗಳು ಒಂದೆಡೆ ರಾರಾಜಿಸಿದರೆ ರತ್ನಗಂಧಿ, ಬಿಳಿದಾಸಾಳ, ನೀಲಿ ಗೋರಂಟಿ, ಬ್ರಹ್ಮಕಮಲ, ಮಲ್ಲಿಗೆ, ಗುಲಾಬಿ ಸುಗಂಧರಾಜ, ಇರುವಂತಿಗೆ, ನಿಶಾರಾಣಿ ಮೊದಲಾದ ವೈವಿಧ್ಯಮಯ ಹೂಗಳ ಅಪೂರ್ವ ಸೊಬಗು ಇನ್ನೊಂದೆಡೆ. ಅಲ್ಲಿ ಸೃಷ್ಟಿಯ ಸೊಬಗು ಸೂರೆಯಾಗಿತ್ತು. ಮೈ–ಮನ ತುಂಬಿ–ತುಳುಕುವಷ್ಟು ಪ್ರಶಾಂತ ವಾತಾವರಣ. ಹಿತವಾಗಿ ಬೀಸುವ ತಂಗಾಳಿ. ಪಕ್ಷಿಸಂಕುಲಗಳ ಕಲರವ. ಕತ್ತು ಮೇಲೆತ್ತಿದರೆ ನೀಲಾಕಾಶ. 'ಬನ್ನಿ, ಒಳಗೆ ಬನ್ನಿ' ಕುಮಾರ್ ನನ್ನ ಕೈ ಹಿಡಿದು ಮನೆಯ ಔಟ್‌ಹೌಸಿಗೆ ಕರೆದೊಯ್ದರು. 'ನಮಸ್ಕಾರ' ಹೆಣ್ಣುದನಿಯೊಂದು ಬಂದ ಕಡೆ ನೋಡಿದೆ. ಸಾಧಾರಣ ರೂಪಿನ, ಅಜಮಾಸ್ 38–40 ವಯಸ್ಸಿನ ಮಹಿಳೆಯೊಬ್ಬಳು ಕೈಯಲ್ಲಿ ಜ್ಯೂಸ್ ಗ್ಲಾಸ್ ಹಿಡಿದು ಮುಗುಳ್ನಗುತ್ತ ನಿಂತಿದ್ದರು. ಸರಳವಾದ ಉಡುಗೆ–ತೊಡುಗೆ. ಆದರೆ ಆಕರ್ಷಕ ಪರ್ಸ್‌ನಾಲಿಟಿ. 'ನಮಸ್ಕಾರ ಮೇಡಮ್' ಅಂದೆ. 'ಇವಳು ಭಾರತಿ. ಆದರೆ ಭಾರ ಇನ್ನೂ ಆಗಿಲ್ಲ. ನನ್ನ ವುಮನ್ ಫ್ರೆಂಡ್' ಅಂತ ಕುಮಾರ್ ಚಟಾಕಿ ಹಾರಿಸಿದರು. ತಕ್ಷಣ ನನಗೆ ನೇಹಾ ಆಡಿದ ಮಾತು ಮನಸ್ಸಿನಲ್ಲಿ ಹಾದು ಹೋಯಿತು. ಕ್ಷಣಕಾಲ ವಿಚಲಿತನಾದೆ. 'ಟ್ರೆಕ್ಕಿಂಗ್‌ನಲ್ಲಿ ಎಕ್ಸಿಡೆಂಟ್ ಆಗಿತ್ತು ಅಂದ್ರು. ಈಗ ಹೇಗಿದ್ದೀರಾ?' ನಾನು ವಿಚಾರಿಸಿದೆ. 'ಪರವಾಯಿಲ್ಲ ಸಾರ್. ಇಟ್ ವಾಸ್ ಎ ಸ್ಮಾಲ್ ಇಂಜುರಿ. ನೌ ಐ ಎಮ್ ಓ.ಕೆ.' ಎಲ್ಲರದೂ ಜ್ಯೂಸ್ ಸೇವನೆಯಾಯಿತು. ದೇಹ–ಮನಸ್ಸು ತಂಪಾಯಿತು.

'ಮೂರ್ತಿ ಸಾರ್, ನಮ್ಮ ಸಂಸಾರ ದೊಡ್ಡದು, ಬನ್ನಿ ನೋಡುವಿರಂತೆ' ಕುಮಾರ್ ಹೊರಗೆ ಹೋಗುತ್ತ ಮಾತಿಗಾರಂಭಿಸಿದರು. ನಾವು ಮೌನವಾಗಿ ಅವರನ್ನು ಅನುಸರಿಸಿದೆವು. 'ಇದು ಹನ್ನೆರಡು ಎಕರೆ ಎಸ್ಟೇಟ್. ಹತ್ತು ವರ್ಷಗಳ ಹಿಂದೆ ಒಂದು ಕೋಟಿಗೆ ಖರೀದಿಸಿದ್ದು.' ಒಂದು